# ಬೋಧನೆಯ ಮೇಲೆ 'ಹೆಚ್ಚುವರಿ' ಬೋಧನೇತರ ಕಾರ್ಯಗಳ ಪರಿಣಾಮ

*– ರವಿಕುಮಾರ್ ಬಿ. ಟಿ*

## ಲೇಖನದ ಸಾರಾಂಶ

*ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರು, ಶಿಕ್ಷಣ ಇಲಾಖೆಯೂ ಸೇರಿದಂತೆ ಸರ್ಕಾರದಿಂದ ನಿಯೋಜಿತವಾದ ಹಲವು ಬೋಧನೇತರ ಚಟುವಟಿಕೆಗಳನ್ನು ಹೆಚ್ಚುವರಿಯಾಗಿ ನಿರ್ವಹಿಸಬೇಕಾಗುತ್ತದೆ. ಈ 'ಹೆಚ್ಚುವರಿ ಬೋಧನೇತರ' ಕೆಲಸಗಳ ನಿರ್ವಹಣೆಯ ಜೊತೆಯಲ್ಲಿಯೇ ಬೋಧನೆಯು ಜರುಗಬೇಕಾಗಿರುವುದರಿಂದ ಇವು ಬೋಧನೆಯ ಸಮಯ ಮತ್ತು ಗುಣಮಟ್ಟದ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತಿದೆ ಎನ್ನುವುದು ಈ ಲೇಖನದ ವಾದವಾಗಿದೆ. ಸಮಸ್ಯೆಯನ್ನು ಕಾರ್ಯರೂಪದ ಹಂತದಲ್ಲಿಯೇ ಕಂಡುಕೊಂಡು, ಆ ನೆಲೆಯಲ್ಲಿಯೇ ಅದನ್ನು ಬಗೆಹರಿಸಲು ಸಹಾಯ ಮಾಡುವ ನಿಟ್ಟಿನಲ್ಲಿ ಈ ಲೇಖನವು ಬೋಧನೇತರ ಕಾರ್ಯಗಳು ಶಿಕ್ಷಕರ ಬೋಧನೆ ಮತ್ತು ಬೋಧನಾ ಸಮಯದ ಮೇಲೆ ಬೀರುತ್ತಿರುವ ಪರಿಣಾಮಗಳನ್ನು ಪರಿಶೀಲಿಸುತ್ತದೆ. ಅದರಲ್ಲೂ ಮುಖ್ಯವಾಗಿ ಏಕೋಪಾಧ್ಯಾಯ ಶಾಲೆಗಳಲ್ಲಿ ಇದರ ಸಮಸ್ಯೆಯು ಇನ್ನಷ್ಟು ತೀವ್ರವಾಗಿಯೇ ಇರುತ್ತದೆ.*

*ಈ ಅಧ್ಯಯನದ ಭಾಗವಾಗಿ ಎರಡು ಬಗೆಯ ಮಾಹಿತಿಗಳನ್ನು ಅವಲೋಕಿಸಲಾಗಿದೆ. ಮೊದಲನೆಯದಾಗಿ ಆಯ್ದ ಶಿಕ್ಷಕರ ದಿನಚರಿಯ ವಿಶ್ಲೇಷಣೆ, ಎರಡನೆಯದಾಗಿ ಆ ಶಿಕ್ಷಕರೊಂದಿಗೆ ನಡೆಸಿದ ಸಂದರ್ಶನ. ಇದಕ್ಕಾಗಿ ಮಂಡ್ಯ ಉತ್ತರ ವಲಯದ ಕೆಲವು ಶಿಕ್ಷಕರು ಮತ್ತು ಶಾಲೆಗಳ ಅಧ್ಯಯನದ ಮೂಲಕ ವಾಸ್ತವದಲ್ಲಿ ಶಿಕ್ಷಕರು ಬೋಧನೆ, ಬೋಧನೇತರ ಚಟುವಟಿಕೆಗಳು ಮತ್ತು ಇತರ ಶಾಲಾ ಪ್ರಕ್ರಿಯೆಗಳಿಗೆ ಎಷ್ಟು ಸಮಯವನ್ನು ಮೀಸಲಿಟ್ಟಿದ್ದಾರೆ ಎಂಬುದರ ಮೇಲೆ ಗಮನ ಹರಿಸಿ ಶಿಕ್ಷಕ; ಮಕ್ಕಳ ಅನುಪಾತವನ್ನು ರಾಜ್ಯವಾರು ಸರಾಸರಿಯಂತೆ ಲೆಕ್ಕಹಾಕದೆ ತರಗತಿಗೊಬ್ಬರಂತೆ ಶಿಕ್ಷಕರು ಹಾಗೂ ವಿಷಯವಾರು ಶಿಕ್ಷಕರನ್ನು ನೇಮಕ ಮಾಡದಿದ್ದರೆ ಪ್ರತಿ ಮಗುವಿಗೂ ಗುಣಮಟ್ಟದ ಶಿಕ್ಷಣವನ್ನು ನೀಡುವ ಆಶಯ ಮರೀಚಿಕೆಯಾಗಿಯೇ ಉಳಿದೀತು ಎನ್ನುವ ಒಳನೋಟವನ್ನು ಲೇಖನವು ಮನಗಾಣಿಸುತ್ತದೆ. ಅಂತಿಮವಾಗಿ ಶಿಕ್ಷಕರ ತರಬೇತಿ, ಆಸಕ್ತಿ, ಪೂರ್ವಸಿದ್ಧತೆಗಳು ಎಷ್ಟೇ ಉತ್ತಮವಾಗಿದ್ದರೂ ಅವನ್ನು ಅನುಷ್ಠಾನಗೊಳಿಸಲು*

*ಅಗತ್ಯವಾದ ಸಮಯ, ಅವಕಾಶ ಮತ್ತು ವಾತಾವರಣದ ಅಗತ್ಯವನ್ನು ಈ ಲೇಖನವು ಒತ್ತಿಹೇಳುತ್ತದೆ.*

**ಪೀಠಿಕೆ**

ಸರ್ಕಾರಿ ಶಾಲೆಗಳ ಪರಿಸ್ಥಿತಿಯು ಅಷ್ಟು ಉತ್ತಮವಾಗಿಲ್ಲವೆಂಬ ಅಭಿಪ್ರಾಯಗಳು ಆಗಾಗ್ಗೆ ಕೇಳಿ ಬರುತ್ತವೆ. ಇದನ್ನು ಹೇಗೆ ಸುಧಾರಿಸಬೇಕು ಎನ್ನುವ ಸಲಹೆ ಸೂಚನೆಗಳು ಹಲವು ಮೂಲಗಳಿಂದ ಹರಿದು ಬರುತ್ತಲೇ ಇರುತ್ತವೆ. ಸರ್ಕಾರಿ ಶಾಲೆಗಳ ಪರಿಸ್ಥಿತಿಯು ಉತ್ತಮವಾಗಿಲ್ಲ ಎಂದು ಹೇಳುವಾಗ, ಅದಕ್ಕೆ ನೀಡುವ ಹಲವು ಮುಖ್ಯವಾದ ಕಾರಣಗಳಲ್ಲಿ ಮೊದಲ ಸ್ಥಾನದಲ್ಲಿರುವುದು ಶಿಕ್ಷಕರ ಬೋಧನಾ ಮಟ್ಟ ಕುಸಿದಿದೆ ಎನ್ನುವುದಾಗಿದೆ. ಇದಕ್ಕೆ ಶಿಕ್ಷಕರಿಗೆ ನೀಡುವ ತರಬೇತಿ, ಹಿಂದಿನ ತರಬೇತಿಗಳಲ್ಲಿನ ಅನುಭವಗಳಿಂದಾಗಿ ಅವರ ಆಸಕ್ತಿರಹಿತತೆ, ಸಂಪನ್ಮೂಲ ವ್ಯಕ್ತಿಗಳ ಪೂರ್ವಸಿದ್ಧತೆಯ ಕೊರತೆ ಇತ್ಯಾದಿಗಳನ್ನು ಕಾರಣಗಳಾಗಿ ನೀಡಲಾಗುತ್ತದೆ. ಈ ಕಾರಣಗಳನ್ನು ನೀಡುವವರಲ್ಲಿ ಹೆಚ್ಚಾಗಿ ಶಿಕ್ಷಕರ ವೃತ್ತಿಯಿಂದ ಹೊರಗಿರುವವರು. ಆದರೆ ಇದಕ್ಕೆ ಶಿಕ್ಷಕರು ನೀಡುವ ಕಾರಣಗಳೇ ಬೇರೆ: ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಶಿಕ್ಷಕರೊಂದಿಗೆ ನಡೆಸಿದ ಅನೇಕ ಭೇಟಿ, ಸಂವಾದಗಳಲ್ಲಿ, ಬೋಧನೆಯ ಗುಣಮಟ್ಟದ ಕುಸಿತಕ್ಕೆ ಅವರು ನೀಡಿದ ಸಮಸ್ಯೆಯ ಪಟ್ಟಿಗಳಲ್ಲಿ ಬಹುತೇಕ ಮೊದಲ ಸ್ಥಾನದಲ್ಲಿರುತ್ತಿದ್ದದ್ದು, ಅವರ ಬೋಧನೆಯ ಮೇಲೆ ಹೊರೆಯಾಗಿರುವ 'ಹೆಚ್ಚುವರಿ ಬೋಧಕೇತರ' ಕೆಲಸಗಳು. ಸರ್ಕಾರವು ರೂಪಿಸಿರುವ ಅನೇಕ ಯೋಜನೆಗಳ ಅನುಷ್ಠಾನಕ್ಕಾಗಿ ಶಿಕ್ಷಕರು ಅನಿವಾರ್ಯವಾಗಿ ತೊಡಗಿಕೊಳ್ಳಬೇಕಾಗಿದ್ದು, ನೇರವಾಗಿ ಬೋಧನೆಗೆ ಸಂಬಂಧಿಸಿರದ ಅಂತಹ ಚಟುವಟಿಕೆಗಳನ್ನು ಇಲ್ಲಿ 'ಬೋಧನೇತರ ಚಟುವಟಿಕೆಗಳು' ಎಂದು ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಲೇಖನವು ಶಿಕ್ಷಕರ ಬೋಧನೆಯ ಮೇಲೆ ಹೆಚ್ಚುವರಿ ಬೋಧನೇತರ ಕೆಲಸಗಳು ಉಂಟುಮಾಡುವ ಪರಿಣಾಮಗಳನ್ನು ಪರಿಶೀಲನೆಗೆ ಒಳಪಡಿಸುತ್ತದೆ. ಬೋಧನೆಯ ಮೇಲೆ ಈ ಹೆಚ್ಚುವರಿ ಕಾರ್ಯಗಳ ಹೊರೆಯ ಪರಿಣಾಮವು ನೇತ್ಯಾತ್ಮಕವಾಗಿದ್ದರೆ, ಶಿಕ್ಷಕರಿಗೆ ಉತ್ತಮ ತರಬೇತಿ, ಆಸಕ್ತಿ ಹೊಂದಿದ್ದರೂ ಬೋಧನೆಯನ್ನು ಉತ್ತಮಗೊಳಿಸಲು ಬೇಕಾದ ಪೂರ್ವಸಿದ್ಧತೆಗೆ ಇದು ಅವಕಾಶ ಮಾಡಿಕೊಡುವುದಿಲ್ಲ. ಹಾಗಾಗಿ ಸರ್ಕಾರಿ ಶಾಲೆಗಳ ಶಿಕ್ಷಕರ ಬೋಧನೆಯ ಮೇಲೆ ಬೋಧಕೇತರ ಹೆಚ್ಚುವರಿ ಕೆಲಸಗಳ ಪರಿಣಾಮವೇನು? ಎನ್ನುವುದನ್ನು ಈ ಲೇಖನವು ಪರಿಶೋಧಿಸುತ್ತದೆ.

ಈ ಪ್ರಶ್ನೆಯ ಪರಿಶೀಲನೆಯು 30ಕ್ಕಿಂತ ಕಡಿಮೆ ಮಕ್ಕಳಿರುವ ಏಕೋಪಾಧ್ಯಾಯ ಶಾಲೆಗಳಲ್ಲಿನ ಶಿಕ್ಷಕರ ಹೆಚ್ಚುವರಿ ಬೋಧನೇತರ ಕೆಲಸಗಳನ್ನು ಒರೆಗೆ ಹಚ್ಚುತ್ತದಲ್ಲದೆ ವಿಷಯವಾರು ಶಿಕ್ಷಕರು ಇಲ್ಲದಿರುವ ಇತರ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿಯೂ ಇಂತಹ ಚಟುವಟಿಕೆಗಳು ಬೋಧನೆಯ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಸಹ ಪರಿಶೀಲಿಸಲು ಪ್ರಯತ್ನಿಸುತ್ತದೆ. ಸಾಪೇಕ್ಷವಾಗಿ, ಪ್ರತಿ ವಿಷಯದ ಬೋಧನೆಗೆ

ಬೇಕಾಗುವ ತಯಾರಿ ಮತ್ತು ಬೋಧನೆಯ ಕ್ರಮವು ಭಿನ್ನವಾಗಿರುತ್ತದೆ. ಹೀಗಿರುವಾಗ ಎಲ್ಲಾ ವಿಷಯಗಳನ್ನು ಒಬ್ಬನೇ/ಳೇ ಬೋಧಕ/ಕಿ ಬೋಧಿಸಲು ತೊಡಗಿದಾಗ ಆಗುವ ಪರಿಣಾಮಗಳನ್ನೂ ಕೂಡಾ ಗಮನಿಸಬೇಕು ಎನ್ನುವುದು ಶಿಕ್ಷಕರೊಂದಿಗಿನ ಸಂವಾದದಲ್ಲಿ ಹೊರಹೊಮ್ಮುತ್ತದೆ.

## ಅಧ್ಯಯನ ವಿಧಾನ

ಈ ಅಧ್ಯಯನಕ್ಕೆ 2015–16ನೇ ಸಾಲಿನ ಅಂಕಿ–ಅಂಶದಂತೆ ಮಂಡ್ಯ ಜಿಲ್ಲೆಯ 8 ಶೈಕ್ಷಣಿಕ ವಲಯಗಳಲ್ಲಿ ನಿರ್ದಿಷ್ಟವಾಗಿ ಉತ್ತರ ವಲಯದ 5 ಏಕೋಪಾಧ್ಯಾಯ/ಇಬ್ಬರು ಶಿಕ್ಷಕರಿರುವ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಈ ಆಯ್ದ ಶಾಲೆಗಳಲ್ಲಿ ಇರುವ ಪ್ರತಿಯೊಬ್ಬ ಶಿಕ್ಷಕರಿಗೆ ಈ ಅಧ್ಯಯನದ ಉದ್ದೇಶವನ್ನು ವಿವರಿಸಿ ಅವರಿಗೆ ವಸ್ತುನಿಷ್ಠ ಮಾಹಿತಿ ಒದಗಿಸಿ ಸಹಕಾರ ನೀಡುವಂತೆ ಕೋರಲಾಯಿತು. ಶಿಕ್ಷಕರಿಂದ ಮಾಹಿತಿ ಪಡೆಯಲು ಎರಡು ವಿಧಾನಗಳನ್ನು ಅನುಸರಿಸಲಾಯಿತು, ಅವುಗಳೆಂದರೆ: ಅ) ಶಿಕ್ಷಕರ ದಿನಚರಿ ಮಾಹಿತಿ ಆ) ಸಂರಚಿತ ಪ್ರಶ್ನಾವಳಿ ಮೂಲಕ ಸಂದರ್ಶನ.

## ಅ) ಆಯ್ದ ಶಿಕ್ಷಕರು ಬರೆದ ದಿನಚರಿ ಮಾಹಿತಿಯ ವಿಶ್ಲೇಷಣೆ

ಅಧ್ಯಯನದ ಆರಂಭದಲ್ಲಿ ಪ್ರತಿ ಶಿಕ್ಷಕರಿಂದ ವೃತ್ತಿಗೆ ಸಂಬಂಧಿಸಿದಂತೆ 30 ದಿನಗಳ ದಿನಚರಿಯನ್ನು ಬರೆಸಲು ಆಲೋಚಿಸಲಾಗಿತ್ತು. ಆದರೆ ಸಮಯದ ಹೊಂದಾಣಿಕೆಯ ಸಮಸ್ಯೆಯಿಂದಾಗಿ 6 ಶಿಕ್ಷಕರಿಂದ 10 ದಿನಗಳ ದಿನಚರಿಯನ್ನು ಮಾತ್ರ ಸಂಗ್ರಹಿಸಲಾಯಿತು. ಈ ದಿನಚರಿಯು ಶಿಕ್ಷಕರು ಪ್ರತಿದಿನ ತಮ್ಮ ವೃತ್ತಿಸಮಯವನ್ನು ಹೇಗೆ ನಿರ್ವಹಿಸುತ್ತಿದ್ದಾರೆ ಮತ್ತು ಅವರು ಶಾಲೆಯ ಏನೆಲ್ಲಾ ಕಾರ್ಯಗಳನ್ನು ಕೈಗೊಳ್ಳುತ್ತಾರೆ ಎಂಬ ಮಾಹಿತಿಗಳನ್ನು ಒಳಗೊಂಡಿತ್ತು. ಈ ಮಾಹಿತಿ ಸಂಗ್ರಹಿಸುವ ಸಲುವಾಗಿ ಅವರ ಶಾಲೆಯ ಸಮಯವನ್ನು ಬೋಧನೆ, ಸಹಪಠ್ಯ, ಬೋಧನೇತರ ಮತ್ತು ಬಳಕೆಯಾಗದ ಸಮಯಗಳೆಂಬ ನಾಲ್ಕು ಭಾಗಗಳಲ್ಲಿ ವಿಂಗಡಿಸಿ ಕಾರ್ಯಹಾಳೆ (ವರ್ಕ್‌ಶೀಟ್) ಗಳನ್ನು ಪ್ರತಿಯೊಬ್ಬ ಶಿಕ್ಷಕರಿಗೂ ನೀಡಲಾಯಿತು. ಶಿಕ್ಷಕರು ಈ ನಾಲ್ಕು ಅಂಶಗಳಿಗೆ ಸಂಬಂಧಿಸಿದಂತೆ ತಾವು ತೊಡಗಿಸಿಕೊಂಡ ಸಮಯವನ್ನು ಇದರಲ್ಲಿ ನಮೂದಿಸಬೇಕೆಂದು ಸೂಚಿಸಲಾಗಿತ್ತು.

ಸರ್ಕಾರವು ನಿಗದಿಪಡಿಸಿರುವಂತೆ ಶಿಕ್ಷಕರು ವಾರದಲ್ಲಿ ಕನಿಷ್ಠ 45 ಗಂಟೆಗಳು ಅಂದರೆ ದಿನವೊಂದರಲ್ಲಿ 7 ರಿಂದ 7.30 ಗಂಟೆಗಳ ಕಾಲ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಾರೆ ಎಂದು ಪರಿಗಣಿಸಲಾಯಿತು. ದಿನಚರಿಯ ಮೂಲಕ ಸಂಗ್ರಹಿಸಿದ 10 ದಿನಗಳ ಮಾಹಿತಿಯಲ್ಲಿ ಮೊದಲ ಒಂದು ವಾರದ ಅಂದರೆ 6 ದಿನಗಳಲ್ಲಿ ಅವರು ಕಾರ್ಯನಿರ್ವಹಿಸಿದ ಸಮಯವನ್ನು ಬೋಧನೆ, ಸಹಪಠ್ಯ, ಬೋಧನೇತರ ಮತ್ತು ಬಳಕೆಯಾಗದ ಸಮಯಗಳೆಂಬ ನಾಲ್ಕು ಭಾಗಗಳಲ್ಲಿ ವಿಂಗಡಿಸಿ, ವಿಶ್ಲೇಷಿಸಿದಾಗ ಕೆಳಗಿನ ಅಂಶಗಳು ಬೆಳಕಿಗೆ ಬಂದವು.

## 1. ಬೋಧನೆಗೆ ಮೀಸಲಿಟ್ಟ ಸಮಯ

ಶಿಕ್ಷಕರು ಒಂದು ವಾರದಲ್ಲಿ ಕನಿಷ್ಠ 45 ಗಂಟೆಗಳಷ್ಟು ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ 6 ಶಿಕ್ಷಕರ ತಲಾ 6 ದಿನಗಳ ಕರ್ತವ್ಯದ ಸರಾಸರಿ ಅವಧಿಯು 35 ಗಂಟೆಗಳಷ್ಟು ಬಳಕೆಯಾಗುತ್ತಿರುವುದು ಕಂಡುಬಂದಿತು. ಅಂದರೆ ದಿನವೊಂದರಲ್ಲಿ ಸರಾಸರಿ 5.50 ಗಂಟೆಗಳ ಕಾಲ ಶಾಲಾ ಕಾರ್ಯಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ಇದರಲ್ಲಿ ಬೋಧನೆಗೆ ಬಳಸುವ ಸಮಯ ದಿನಕ್ಕೆ ಸರಾಸರಿ 3.30 ಗಂಟೆಗಳು. 6 ಶಿಕ್ಷಕರು ಬೋಧನೆಗಾಗಿ ವಿನಿಯೋಗಿಸಲಾದ ಸರಾಸರಿ ಸಮಯವನ್ನು ಗಮನಿಸಲಾಯಿತು. ಅದರಂತೆ 6 ಶಿಕ್ಷಕರು ದಿನದಲ್ಲಿ ಕನಿಷ್ಠ 1.50 ಗಂಟೆಯಿಂದ (1.83) ಗರಿಷ್ಠ 4.30 (4.50) ಗಂಟೆವರೆಗೆ ಬೋಧನೆಗಾಗಿ ಸಮಯವನ್ನು ವಿನಿಯೋಗಿಸಿರುವುದಾಗಿ ಹೇಳಿದ್ದಾರೆ. ಇದರಂತೆ 6 ಶಿಕ್ಷಕರ ತರಗತಿ ನಿರ್ವಹಣೆಯ ದಿನದ ಸರಾಸರಿ ಅವಧಿ 3 ಗಂಟೆ 20 ನಿಮಿಷಗಳು. ದಿನವೊಂದರಲ್ಲಿ 7 ಗಂಟೆಗಳಿಗೂ ಹೆಚ್ಚು ಕಾಲ ಶಾಲಾ ಕಾರ್ಯನಿರ್ವಹಣೆಗೆ ಲಭ್ಯವಿರುವ ಸಮಯದಲ್ಲಿ ಇವರು ಮಕ್ಕಳ ವಿಷಯ ಕಲಿಕೆಗೆ ಅರ್ಧಕ್ಕಿಂತಲೂ ಕಡಿಮೆ ಸಮಯವನ್ನು, ಅಂದರೆ ಶೇ.47.4ರಷ್ಟು ಸಮಯವನ್ನು ವಿನಿಯೋಗಿಸುತ್ತಿರುವುದನ್ನು ಇದರಿಂದ ಕಾಣಬಹುದು.

## 2. ಸಹಪಠ್ಯ ಚಟುವಟಿಕೆಗಳಿಗೆ ಮೀಸಲಿಟ್ಟ ಸಮಯ

ಆರು ಶಿಕ್ಷಕರಲ್ಲಿ ಏಕೋಪಾಧ್ಯಾಯರಿರುವ ಶಾಲೆಯೊಂದರಲ್ಲಿ ಸಹಪಠ್ಯ ಚಟುವಟಿಕೆಗೆ ಹೆಚ್ಚಿನ ಸಮಯ ನೀಡಲು ಸಾಧ್ಯವಾಗಿಲ್ಲದಿರುವುದನ್ನು ಕಾಣಬಹುದು. (ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸುವುದನ್ನು ಹೊರತುಪಡಿಸಿದರೆ) ಈ ಶಿಕ್ಷಕರು ಸಹಪಠ್ಯ ನಡೆಸುವ ಸಮಯದಲ್ಲಿ ವಿವಿಧ ಶಾಲಾ ನಿರ್ವಹಣಾ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕಾಗಿದ್ದುದರಿಂದ ಇವರು ಅತಿಥಿ ಶಿಕ್ಷಕರಿಗೆ ಸಹಪಠ್ಯ ಚಟುವಟಿಕೆಗಳ ಜವಾಬ್ದಾರಿಯನ್ನು ವಹಿಸಿದ್ದರು ಎಂಬ ಅಂಶ ತಿಳಿದುಬಂತು. ಉಳಿದಂತೆ ದಿನವೊಂದಕ್ಕೆ ಸರಾಸರಿ 30 (ಶೇ.0.56) ನಿಮಿಷಗಳಷ್ಟು ಸಮಯವನ್ನು ನೀಡಿರುವುದನ್ನು ಕಾಣಬಹುದಾಗಿದೆ. ಈ ಮೂಲಕ ಶಿಕ್ಷಕರು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಅಪೇಕ್ಷಿತ ಮಟ್ಟದಲ್ಲಿ ತೊಡಗಿಕೊಳ್ಳಲು ಸಾಧ್ಯವಾಗದಿರುವುದು ಕಂಡುಬರುತ್ತದೆ.

## 3. ಬೋಧನೇತರ ಚಟುವಟಿಕೆಗಳಿಗೆ ಮೀಸಲಿಟ್ಟ ಸಮಯ

ಶಿಕ್ಷಕರ ದಿನಚರಿಯ ಆಧಾರದ ಮೇಲೆ ಇಂತಹ ಬೋಧನೇತರ ಚಟುವಟಿಕೆಗಳು ಮತ್ತು ಅವುಗಳಲ್ಲಿ ಶಿಕ್ಷಕರು ತೊಡಗಿಕೊಳ್ಳುವ ಶೇಕಡವಾರು ಮಾಹಿತಿ ಹೀಗಿದೆ: ಅ) ಬಿಸಿಯೂಟದ ನಿರ್ವಹಣೆಗೆ ಮೀಸಲಿಟ್ಟ ಸಮಯ ಸುಮಾರು ಶೇ. 12% ರಷ್ಟು; ಆ) ಮಗುವಿನ ಪಾಲಕರು, ಸಮುದಾಯ ಹಾಗೂ ಎಸ್.ಡಿ.ಎಂ.ಸಿ. ಜೊತೆಗೆ

ವ್ಯವಹರಿಸುವ ಸಮಯ ಸುಮಾರು ಶೇ.9%ರಷ್ಟು; ಇ)ಶಾಲಾ ಸ್ವಚ್ಛತೆ ಮತ್ತು ಪ್ರಾರ್ಥನೆಗಳಿಗೆ ಬಳಸಲಾಗಿರುವ ಸಮಯ ಶೇ.0.46% ರಷ್ಟು.

## 4. ಬಳಸದೆ ಉಳಿದ ಸಮಯ

ಈ ಸಮಯದ ಬಗೆಗೆ ಮಾಹಿತಿಯು ದಿನಚರಿಯಲ್ಲಿ ಸಿಗುವುದಿಲ್ಲ. ಶಿಕ್ಷಕರೊಂದಿಗಿನ ಸಂದರ್ಶನದಲ್ಲಿ ಈ ಕುರಿತು ಮಾಹಿತಿ ಪಡೆದುಕೊಳ್ಳಲಾಯಿತು. ದಿನಚರಿಯಲ್ಲಿ ಸಿಕ್ಕ ಅಂಕಿ–ಅಂಶದಲ್ಲಿ 5 ಗಂಟೆ 40 ನಿಮಿಷಗಳಿಗೆ ಮಾತ್ರ (ಕೋಷ್ಟಕ 1ನ್ನು ನೋಡಿ) ಲೆಕ್ಕ ಸಿಗುತ್ತದೆ.

**(ಕೋಷ್ಟಕ 1)**

| ದಿನದಲ್ಲಿ ಬೋಧನೆ ಮತ್ತು ಬೋಧನೇತರ ಚಟುವಟಿಕೆಗಳಿಗೆ ಬಳಸಿದ ಸರಾಸರಿ ಸಮಯ | | | | |
|---|---|---|---|---|
| ಬೋಧನೆ | ಬೋಧನೇತರ | ಶಾಲಾ ಪ್ರಕ್ರಿಯೆಗೆ ಬಳಸಿದ ಒಟ್ಟು ಸಮಯ | ಕಾರಣ ತಿಳಿಯದೆ ವ್ಯಯಿಸಿದ ಸಮಯ | ದಿನದಲ್ಲಿ ಶಾಲೆ ನಡೆಯುವ ಒಟ್ಟು ಕಾಲಾವಧಿ |
| 3.2 | 2.2 | 5.40 | 1.2 | 7.0 |

ಉಳಿದ 1 ಗಂಟೆಗೂ ಹೆಚ್ಚು ಸಮಯಕ್ಕೆ ದಿನನಿತ್ಯದ ಅಡುಗೆ ಸಾಮಗ್ರಿಗಳನ್ನು ಕೊಂಡು ತರುವುದು, ಸಮುದಾಯಕ್ಕೆ, ಪಾಲಕರ ಮನೆಗಳಿಗೆ ಭೇಟಿ ನೀಡುವುದು, ಇಲಾಖೆ ಅಥವಾ ಬೇರೆ ಬೇರೆ ಸ್ಥಳಗಳಿಗೆ ಭೇಟಿ ನೀಡುವುದಕ್ಕೆ ವೆಚ್ಚವಾಗುತ್ತದೆ. ಆದರೆ ಈ ದಿನಚರಿಯಲ್ಲಿ ಶಿಕ್ಷಕರು ಸಂದರ್ಶನದಲ್ಲಿ ತಿಳಿಸಿರುವಂತೆ ಶಾಲೆಗೆ ಬರುವ ಮುಂಚೆ ಮತ್ತು ನಂತರದ ಅವಧಿಯಲ್ಲಿ ಮಾಡುವ ಶಾಲಾ ಕೆಲಸಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಉದಾಹರಣೆಗೆ ಎಸ್.ಎ.ಟಿ.ಎಸ್. (ಸ್ಟೂಡೆಂಟ್ ಅಸೆಸ್ಮೆಂಟ್ ಅಂಡ್ ಟ್ರ್ಯಾಕಿಂಗ್ ಸಿಸ್ಟಮ್), ಶಾಲೆಗೆ ತರಬೇಕಾದ ಸಾಮಗ್ರಿಗಳಿಗಾಗಿ ಸುತ್ತುವ ಸಮಯ (ಮುಂಜಾನೆ ಬಿಸಿಯೂಟಕ್ಕೆ ತರಕಾರಿ ತರುವ ಕೆಲಸ) ಮುಂತಾದವುಗಳನ್ನು ಗಮನಿಸಬಹುದು.

ಒಟ್ಟಾರೆಯಾಗಿ ಬೋಧನೆ ಹಾಗೂ ಶಾಲಾ ನಿರ್ವಹಣೆಯ ಇತರೆ ಚಟುವಟಿಕೆಗಳಿಗೆ ಪ್ರತಿಯೊಬ್ಬ ಶಿಕ್ಷಕರೂ ವ್ಯಯಿಸಿದ ಸಮಯದ ವಿವರವನ್ನು ವಿಶ್ಲೇಷಿಸಿದಾಗ 6 ಶಿಕ್ಷಕರು ವಾರದಲ್ಲಿ ಕನಿಷ್ಠ 11 ಗಂಟೆ (ಶೇ.11.10)ಯಿಂದ ಗರಿಷ್ಠ 27 ಗಂಟೆಗಳಷ್ಟು ಸಮಯವನ್ನು ಮಕ್ಕಳ ಕಲಿಕೆಗೆ ವಿನಿಯೋಗಿಸಿರುವುದನ್ನು ಕಾಣಬಹುದು. ಹಾಗೆಯೇ ಬೋಧನೇತರ ಚಟುವಟಿಕೆಗಳಿಗೆ ಕನಿಷ್ಠ 7.45 (ಶೇ.7.70)ರಿಂದ 27 ಗಂಟೆಗಳವರೆಗೆ ವ್ಯಯಿಸಿರುವುದನ್ನು ಕಾಣಬಹುದು.

ದಿನವೊಂದಕ್ಕೆ ಶಿಕ್ಷಕರು ಬಳಸಿರುವ ಸಮಯವನ್ನು ಸರಾಸರಿಯಾಗಿ ವಿಶ್ಲೇಷಿಸಿದಾಗ ಕಂಡುಬಂದ ಫಲಿತವೆಂದರೆ ಶೇ.50ಕ್ಕಿಂತ ಕಡಿಮೆ ಸಮಯವನ್ನು ಬೋಧನೆಯ ಪ್ರಕ್ರಿಯೆಗೂ, ಶೇ.35ರಷ್ಟು ಸಮಯವನ್ನು ಶಾಲಾ ನಿರ್ವಹಣೆಯ ಪ್ರಕ್ರಿಯೆಗೂ ಬಳಸಿರುವುದನ್ನು ಕಾಣಬಹುದು.

6 ಶಿಕ್ಷಕರು ದಿನವೊಂದರಲ್ಲಿ ಬೋಧನೆ ಮತ್ತು ಬೋಧನೇತರ ಚಟುವಟಿಕೆಗಳಿಗೆ

ಬಳಸಿದ ಸರಾಸರಿ ಸಮಯವು ತಲಾ 3 ಗಂಟೆ 20 ನಿಮಿಷ ಹಾಗೂ 2 ಗಂಟೆ 30 ನಿಮಿಷಗಳಾಗಿವೆ. ಇಲ್ಲಿ ದಿನದ ಒಟ್ಟು ಸಮಯದಲ್ಲಿ ಬೋಧನೆಗೆ ಹೆಚ್ಚಿನ ಸಮಯವನ್ನು ವ್ಯಯಿಸಲಾಗಿರುವುದು ಕಂಡುಬರುತ್ತದೆ. ದಿನದಲ್ಲಿ ಬೋಧನೆ ಮತ್ತು ಬೋಧನೇತರ ಚಟುವಟಿಕೆಗಳಿಗೆ ಬಳಕೆಯಾದ ಒಟ್ಟು ಸಮಯವು 5 ಗಂಟೆ 50 ನಿಮಿಷಗಳಾಗಿರುತ್ತದೆ. ಮೇಲೆ ತಿಳಿಸಿರುವಂತೆ ಒಬ್ಬ ಶಿಕ್ಷಕರು ದಿನವೊಂದರಲ್ಲಿ ಶಾಲಾ ಕಾರ್ಯಗಳಿಗೆ ತೊಡಗಿಸಬೇಕಾದ ಸಮಯವು 7 ಗಂಟೆಗಳಿಗಿಂತಲೂ ಹೆಚ್ಚು (ವಾರಕ್ಕೆ ಕನಿಷ್ಠ 45 ಗಂಟೆಗಳು ಇದನ್ನು 6 ದಿನಗಳಿಗೆ ವಿಭಾಗಿಸಿದಾಗ ಬರುವ ಅವಧಿ).

## ಆ) ನಿರ್ದಿಷ್ಟ ಪ್ರಶ್ನಾವಳಿ ಮೂಲಕ ಶಿಕ್ಷಕರ ಸಂದರ್ಶನ ಮತ್ತು ವಿಶ್ಲೇಷಣೆ

ಈ ಅಧ್ಯಯನಕ್ಕಾಗಿ ಪ್ರತಿ ಶಿಕ್ಷಕರನ್ನು 4 ಪೂರ್ವ–ನಿರ್ಧಾರಿತ ಪ್ರಶ್ನೆಗಳ ಹಿನ್ನೆಲೆಯಲ್ಲಿ ಕನಿಷ್ಠ 1 ಗಂಟೆ ಕಾಲ ಸಂದರ್ಶನ ನಡೆಸಲಾಯಿತು. ಶಿಕ್ಷಕರು ಮುಖ್ಯವಾಗಿ ತರಗತಿ ನಿರ್ವಹಣೆ, ಶಾಲೆಯ ಸಂಪೂರ್ಣ ಜವಾಬ್ದಾರಿ ನಿರ್ವಹಣೆ, ಪ್ರತಿ ಮಗುವಿನ ಬಗ್ಗೆ ತಿಳಿಯಲು ಶಾಲೆಯಲ್ಲಿ ವೈಯಕ್ತಿಕ ಗಮನ ನೀಡುವುದರ ಜೊತೆಗೆ ಸಮುದಾಯದ ಸಂಪರ್ಕ ಹಾಗೂ ಬದಲಾಗುತ್ತಿರುವ ಆಲೋಚನೆಗಳು ಮತ್ತು ಜ್ಞಾನವೃದ್ಧಿಗೆ ಅವರು ಹೇಗೆ ತೊಡಗಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಒಟ್ಟು 6 ಶಿಕ್ಷಕರಿಗೆ ತಲಾ 4 ಪ್ರಶ್ನೆಗಳನ್ನು ಕೇಳಲಾಯಿತು.

**ಪ್ರಶ್ನೆ–1: ಶಾಲೆಯ ಎಲ್ಲಾ ಜವಾಬ್ದಾರಿಗಳನ್ನು ನೀವೇ ನಿರ್ವಹಿಸಬೇಕಾಗಿರುವುದರಿಂದ ಎದುರಾಗುವ ಸವಾಲುಗಳಾವುವು ಮತ್ತು ಅವುಗಳನ್ನು ಹೇಗೆ ನಿಭಾಯಿಸುತ್ತೀರಿ?**

ಈ ಮೇಲಿನ ಪ್ರಶ್ನೆಗೆ ಸಂಬಂಧಿಸಿದಂತೆ ಶೇ.100ರಷ್ಟು ಅಭಿಪ್ರಾಯಗಳು "ಊರಿನವರಿಂದ ವರ್ಗಾವಣೆ ಪತ್ರ, ವ್ಯಾಸಂಗ ಪ್ರಮಾಣ ಪತ್ರ– ಇಂತಹ ದಾಖಲೆಗಳಿಗೆ ಸಾಕಷ್ಟು ಬೇಡಿಕೆಗಳು ಬರುತ್ತವೆ. ಒಬ್ಬರೇ/ನಾವಿಬ್ಬರೇ ಇರುವುದರಿಂದ ಒಬ್ಬರು/ಇಬ್ಬರೂ ಸೇರಿ ಅವರ ಅಗತ್ಯ ದಾಖಲೆಗಳನ್ನು ಪೂರೈಸಬೇಕಾಗಿರುವುದು ಸವಾಲಿನ ಕೆಲಸ". ಇದರ ಜೊತೆಗೆ ಇಲಾಖೆಯಿಂದ ಬರುವ ಜರೂರು ದಾಖಲೆಗಳನ್ನು ಕೂಡಲೇ ತುಂಬಿಸಿ ಕಳುಹಿಸಬೇಕು ಎಂಬ ಅಂಶವನ್ನು ಶೇ.85ರಷ್ಟು ಶಿಕ್ಷಕರು ವ್ಯಕ್ತಪಡಿಸುತ್ತಾರೆ. ಏಕೋಪಾಧ್ಯಾಯ ಮತ್ತು ಕಡಿಮೆ ಶಿಕ್ಷಕರಿರುವ ಶಾಲೆಗಳಲ್ಲಿ ಅನಿವಾರ್ಯ ಸಂದರ್ಭಗಳಲ್ಲಿಯೂ ರಜೆಯನ್ನು ಪಡೆದುಕೊಳ್ಳುವುದು ಕಷ್ಟ ಎಂಬುದು ಶೇ.70ರಷ್ಟು ಶಿಕ್ಷಕರ ಅಭಿಪ್ರಾಯವಾಗಿದೆ. ಉಳಿದಂತೆ ಶೇ.42ರಷ್ಟು ಶಿಕ್ಷಕರು ಕೆಲವು ಮಕ್ಕಳು ಆಗಾಗ ಬೇರೆ ಊರುಗಳಿಗೆ ಹೋಗಿ, ವಾರಗಳ ನಂತರ ಶಾಲೆಗೆ ಬಂದಾಗ ಹಿಂದೆ ಕಲಿತದ್ದನ್ನು ಮರೆತು ಬಂದಿರುತ್ತಾರೆ. ಅವರಿಗೆ ಮತ್ತೆ ಕಲಿಸಬೇಕು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಶೇ.28ರಷ್ಟು ಶಿಕ್ಷಕರು "ಒಬ್ಬರೇ ಇರುವುದರಿಂದ ಯಾವುದೇ ಕಾರ್ಯಾಗಾರಗಳಲ್ಲಿ ಭಾಗವಹಿಸುವುದು ಕಷ್ಟ. ಅತಿಥಿ ಶಿಕ್ಷಕರಿದ್ದರೂ 'ನಲಿ–ಕಲಿ' ಮತ್ತು 'ಓದು ಕರ್ನಾಟಕ' ತರಗತಿಗಳನ್ನು ತರಬೇತಿ ಪಡೆದ ಶಿಕ್ಷಕರೇ ನಿರ್ವಹಣೆ ಮಾಡಬೇಕು. ಇದರೊಂದಿಗೆ 5, 6, 7ನೇ ತರಗತಿಗಳಲ್ಲಿರುವ ಉನ್ನತ ಸಾಮರ್ಥ್ಯಗಳನ್ನು ಕಲಿಸುವಲ್ಲಿ ಅತಿಥಿ ಶಿಕ್ಷಕರಿಗೆ ಕಷ್ಟವಾಗುತ್ತದೆ. ಹೀಗಾಗಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ

ತರಗತಿಗೊಬ್ಬರು ಶಿಕ್ಷಕರು ಇರಲೇಬೇಕು. ಕನಿಷ್ಠ 4 ಜನ ಶಿಕ್ಷಕರಾದರೂ ಇರಬೇಕು. ಇಲ್ಲಿ ಮಕ್ಕಳ ಸಂಖ್ಯೆಗೆ ಆಧಾರಿತವಾಗಿ ಶಿಕ್ಷಕರನ್ನು ನೀಡಬಾರದು ಮತ್ತು ಒಬ್ಬರು, ಇಬ್ಬರು ಶಿಕ್ಷಕರು ಮಾತ್ರ ಇದ್ದರೆ ಮಕ್ಕಳಿಗೆ ನ್ಯಾಯ ಒದಗಿಸುವುದು ಕಷ್ಟವಾಗುತ್ತದೆ" ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ.

**ಪ್ರಶ್ನೆ–2: ಬದಲಾಗುತ್ತಿರುವ ಮತ್ತು ಹೊಸ ಶೈಕ್ಷಣಿಕ ಆಲೋಚನೆಗಳಿಗೆ ಹೊಂದಿಕೊಳ್ಳಲು ಶಿಕ್ಷಕರು ಎಷ್ಟು ಸಮಯವನ್ನು ಮೀಸಲಿಡುತ್ತಾರೆ? ಮತ್ತು ಹೇಗೆ ಹೊಂದಿಸಿಕೊಳ್ಳುತ್ತಾರೆ?**

- ಹೊಸ ಹೊಸ ಶೈಕ್ಷಣಿಕ ಆಲೋಚನೆಗಳಿಗೆ ಮತ್ತು ಬೋಧನಾ ಸಂದರ್ಭದಲ್ಲಿ ಅಗತ್ಯವಿರುವ ಹೆಚ್ಚಿನ ಜ್ಞಾನವನ್ನು ಪಡೆಯಲು ಶೇ.85ರಷ್ಟು ಶಿಕ್ಷಕರು ಇತರೆ ಶಿಕ್ಷಕರ ಹಾಗೂ ಗೆಳೆಯರ ಜೊತೆ ಚರ್ಚಿಸುವ ಪ್ರಕ್ರಿಯೆಯನ್ನು ಬಳಸಿಕೊಂಡಿದ್ದಾರೆ.
- ಸಿ.ಆರ್.ಪಿ. ಇವರೊಂದಿಗೆ ಶೇ.71ರಷ್ಟು ಶಿಕ್ಷಕರು ಫೋನ್ ಮೂಲಕ ಚರ್ಚಿಸಿ ಕಲಿಯುವ ಪ್ರಕ್ರಿಯೆಯನ್ನು ಬಳಸಿಕೊಂಡಿದ್ದಾರೆ.
- ಕ್ಲಸ್ಟರ್ ಸಮಾಲೋಚನ ಸಭೆಗಳಲ್ಲಿನ ಚರ್ಚೆಗಳ ಮೂಲಕ ಕಲಿಯುವ ಪ್ರಕ್ರಿಯೆಯನ್ನು ಶೇ.57ರಷ್ಟು ಶಿಕ್ಷಕರು ಬಳಸಿಕೊಂಡಿದ್ದಾರೆ.
- ಉಳಿದಂತೆ ತಲಾ ಶೇ.40ರಷ್ಟು ಶಿಕ್ಷಕರು ಇಲಾಖೆಯ ತರಬೇತಿಗಳು ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಷನ್ ತರಬೇತಿಗಳ ಮೂಲಕ ಜ್ಞಾನ ಪಡೆದುಕೊಳ್ಳುತ್ತಿರುವ ವಿಷಯವನ್ನು ತಿಳಿಸಿದ್ದಾರೆ.

**ಪ್ರಶ್ನೆ–3: ಪ್ರತಿಯೊಂದು ಮಗುವಿನ ಕಲಿಕೆಗೆ ಶಿಕ್ಷಕರು ಕಾರ್ಯತಂತ್ರ ಮತ್ತು ಯೋಜನೆಗಳನ್ನು ರೂಪಿಸಿ ಹೇಗೆ ಕಾರ್ಯರೂಪಕ್ಕೆ ತರುತ್ತಾರೆ?**

ಈ ಪ್ರಶ್ನೆಗೆ, ಶೇ.71ರಷ್ಟು ಶಿಕ್ಷಕರು ಕೆಲವು ಸಮಯ, ಅಗತ್ಯಕ್ಕೆ ತಕ್ಕಂತೆ ಪಾಠ ಯೋಜನೆ ತಯಾರಿಸಿಕೊಳ್ಳುತ್ತೇವೆ ಎಂದರು. ಉಳಿದಂತೆ ಪಠ್ಯಪುಸ್ತಕವನ್ನು ಬಳಸಿಕೊಂಡು ಕಲಿಸುತ್ತೇವೆ ಎಂದೂ ಮತ್ತು ಶೇ.57ರಷ್ಟು ಶಿಕ್ಷಕರು ಇಲಾಖೆ ನೀಡಿರುವ ಡೈರಿ ಅಥವಾ ಯೋಜನೆಗಳನ್ನು ಬಳಸಿ ಕಲಿಸುತ್ತೇವೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

**ಪ್ರಶ್ನೆ–4: ದಿನನಿತ್ಯದ ಶಾಲಾ ಕರ್ತವ್ಯದ ಜೊತೆಗೆ ಶಿಕ್ಷಕರಿಗೆ ಸಮುದಾಯದ ಜೊತೆಗಿನ ಸಂಪರ್ಕ ಹೇಗಿದೆ? ಎಷ್ಟು ದಿನ/ ವಾರ/ತಿಂಗಳಿಗೆ ಪಾಲಕರನ್ನು ಭೇಟಿ ಮಾಡುತ್ತೀರಿ?**

- ವಾರಕ್ಕೊಮ್ಮೆಯಾದರೂ ಸಮುದಾಯವನ್ನು ಭೇಟಿ ಮಾಡುತ್ತೇವೆ ಎನ್ನುವುದಲ್ಲದೆ ಸಮುದಾಯದ ಭೇಟಿಯಿಂದ ಸಾಕಷ್ಟು ಅನುಕೂಲವಾಗುತ್ತದೆ ಎಂದು ಶೇ.57ರಷ್ಟು ಶಿಕ್ಷಕರು ಹೇಳುತ್ತಾರೆ.
- ಶಿಕ್ಷಕರು ಅನಿವಾರ್ಯ ಸಂದರ್ಭಗಳಲ್ಲಿ ಮಕ್ಕಳು ಸರಿಯಾಗಿ ಶಾಲೆಗೆ ಬರದೆ ಇದ್ದರೆ, ದೀರ್ಘಾವಧಿ ರಜೆ ತೆಗೆದುಕೊಂಡಿದ್ದರೆ ಪಾಲಕರನ್ನು ಭೇಟಿಮಾಡಲು ಹೋಗುತ್ತೇವೆ ಎಂದು ಅದೇ ಶೇ.57ರಷ್ಟು ಪ್ರಮಾಣದ ಶಿಕ್ಷಕರು ಅಭಿಪ್ರಾಯ ಪಡುತ್ತಾರೆ.
- ಸಾಧ್ಯವಾದಷ್ಟು ಸಮುದಾಯದಿಂದ ದೂರ ಉಳಿಯುವುದು ಉತ್ತಮ, ಹಾಗಾಗಿ ನಾವಾಗಿಯೇ ಸಮುದಾಯದ ಹತ್ತಿರ ಹೋಗುವುದು ಕಡಿಮೆ ಎನ್ನುವ ಅಭಿಪ್ರಾಯವನ್ನು ಇನ್ನುಳಿದ ಶೇ.42ರಷ್ಟು ಶಿಕ್ಷಕರ ಅಭಿಪ್ರಾಯವಾಗಿದೆ.

## ಫಲಿತಗಳು

1. ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಇಲ್ಲಿ ಶಿಕ್ಷಕರು ಮಕ್ಕಳ ಕಲಿಕೆಗೆ ವಿನಿಯೋಗಿಸುತ್ತಿರುವ ಸಮಯದಲ್ಲಿ ತಾವು ಬೋಧಿಸುತ್ತಿರುವ ಎಲ್ಲಾ ತರಗತಿಗಳಿಗೆ ಹಾಗೂ ವಿಷಯಗಳ ಕಲಿಕೆಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಲು ಸಾಧ್ಯವಾಗದೆ ಇರುವುದು, ಅದರಲ್ಲೂ ಏಕೋಪಾಧ್ಯಾಯರಿರುವ ಶಾಲೆಗಳಲ್ಲಿ ಇದು ಇನ್ನೂ ಸಮಸ್ಯೆಯಾಗಿ ಇರುವುದು ಕಾಣುತ್ತಿದೆ. ಒಟ್ಟಿನಲ್ಲಿ ಬಹುತೇಕ ಶಿಕ್ಷಕರು ತರಗತಿಯಲ್ಲಿ ಮಕ್ಕಳ ಕಲಿಕೆಗೆ ಅವಕಾಶ ಮಾಡಿಕೊಡುವ ಚಟುವಟಿಕೆಗಳನ್ನು ಆಯೋಜಿಸುವ ಬದಲಾಗಿ ಶಾಲಾ ನಿರ್ವಹಣೆ ಪ್ರಕ್ರಿಯೆಗಳು, ಶಾಲಾ ದಾಖಲಾತಿ ನಿರ್ವಹಣೆ ಹಾಗೂ ಶಾಲಾ ಸಮುದಾಯದ ಜೊತೆಗೆ ಮಾಡಬೇಕಾದ ಕೆಲಸಗಳು ಮುಂತಾದವುಗಳಲ್ಲಿ ಹೆಚ್ಚಿನ ಸಮಯವನ್ನು ವಿನಿಯೋಗಿಸುತ್ತಿರುವುದು ಕಂಡುಬರುತ್ತದೆ. ಅಲ್ಲದೇ, ಶಿಕ್ಷಕರ ದಿನಚರಿಯ ದಾಖಲೆಯ ಆಧಾರದಲ್ಲಿ ಕಂಡುಬರುವ ಮುಖ್ಯಾಂಶಗಳೆಂದರೆ ಒಬ್ಬ ಶಿಕ್ಷಕ ವಾರದಲ್ಲಿ ಕನಿಷ್ಠ 45 ಗಂಟೆಗಳ ಸಮಯವನ್ನು ಶಾಲಾ ಪ್ರಕ್ರಿಯೆಗೆ, ಅಂದರೆ ಮಕ್ಕಳಿಗೆ ಕಲಿಸುವ ಮತ್ತು ಅದಕ್ಕೆ ಪೂರ್ವತಯಾರಿಗಾಗಿ ವಿನಿಯೋಗಿಸಬೇಕಾಗುತ್ತದೆ. ಇದನ್ನು ಸರ್ಕಾರದ ಆದೇಶಗಳು ಮತ್ತು ಆರ್.ಟಿ.ಇ. ನಿಯಮಗಳಿಗೆ ಸಂಬಂಧಿಸಿದ ಸುತ್ತೋಲೆಗಳು ದೃಢಪಡಿಸುತ್ತವೆ. ಏಕೋಪಾಧ್ಯಾಯ ಅಥವಾ ಕಡಿಮೆ ಶಿಕ್ಷಕರಿರುವ ಶಾಲೆಗಳಲ್ಲಿ ವಿಷಯವಾರು ಮತ್ತು ತರಗತಿವಾರು ಪರಿಣಾಮಕಾರಿ ಕಲಿಕೆಯನ್ನು ಅನುಕೂಲಿಸಲು ಸಾಧ್ಯವಾಗುವುದಿಲ್ಲ ಅಂದರೆ ಈ ಶಾಲೆಗಳಲ್ಲಿ ಬೋಧನಾ ಸಮಯವನ್ನು ಇತರ ಕೆಲಸಗಳಿಗಾಗಿ ಹೆಚ್ಚಾಗಿ ವಿನಿಯೋಗಿಸಬೇಕಾಗುತ್ತದೆ.
2. ಮಕ್ಕಳ ಅನುಪಾತದ ಜೊತೆಗೆ ಆ ಶಾಲೆಯಲ್ಲಿರುವ ತರಗತಿಗಳ ಆಧಾರವಾಗಿ ಶಿಕ್ಷಕರನ್ನು ಒದಗಿಸಬೇಕು. ಏಕೆಂದರೆ ಬೇರೆ ವಿಷಯಗಳಿಗೆ ಬೇಕಾದ ಪೂರ್ವಸಿದ್ಧತೆಗಳು ಬೇರೆ ಬೇರೆಯಾಗಿರುತ್ತದೆ. ಏಕೋಪಾಧ್ಯಾಯ ಹಾಗೂ ಅಗತ್ಯಕ್ಕಿಂತ ಕಡಿಮೆ ಶಿಕ್ಷಕರಿರುವ ಶಾಲೆಗಳಲ್ಲಿ ಮಕ್ಕಳ ಕಲಿಕೆಗೆ ಹಾಗೂ ಶಾಲೆಯ ಇತರೆ ಕೆಲಸಗಳಿಗೆ ಸಮಾನವಾದ ಸಮಯವನ್ನು ವ್ಯಯಿಸುವುದು ಕಂಡುಬರುತ್ತದೆ. ಹೀಗಾಗಿ ಅವರು ತೀವ್ರ ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ನಲಿ–ಕಲಿಯ 1, 2, 3ನೇ ತರಗತಿಗಳ ಕನ್ನಡ, ಗಣಿತ ಮತ್ತು ಪರಿಸರ ಅಧ್ಯಯನ – ಈ ಮೂರು ವಿಷಯಗಳನ್ನು ಕನಿಷ್ಠ 30 ನಿಮಿಷವಾದರೂ ಪ್ರತಿ ವಿಷಯದ ಬೋಧನೆಗೆಂದು ವ್ಯಯಿಸಿದರೂ ಕನಿಷ್ಠ 4 ಗಂಟೆ 50 ನಿಮಿಷಗಳನ್ನು ಬೋಧನೆಗೆ ವಿನಿಯೋಗಿಸಬೇಕಾಗಿದ್ದು ಒಬ್ಬ ಶಿಕ್ಷಕ/ಕಿ ಸರಾಸರಿ 3 ಗಂಟೆ 20 ನಿಮಿಷದಷ್ಟು ಸಮಯವನ್ನು ಮಾತ್ರ ಬೋಧನೆಗೆ ಮೀಸಲಿಡಲು ಸಾಧ್ಯವಾಗುತ್ತಿದೆ. ಆದರೆ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಶಿಕ್ಷಕರಿರುವ ಶಾಲೆಗಳಲ್ಲಿ ಮಕ್ಕಳ ಕಲಿಕೆಗೆ ಹೆಚ್ಚಿನ ಸಮಯವನ್ನು ವಿನಿಯೋಗಿಸಬಹುದು.

## ಉಪಸಂಹಾರ

ಬೋಧನೆಯಲ್ಲಿ ಪ್ರತಿ ವಿಷಯಕ್ಕೂ ಮತ್ತು ವಿದ್ಯಾರ್ಥಿಗಳಿಗೂ ನೀಡಬೇಕಾದ ಗಮನ ಮತ್ತು ಪೂರ್ವಸಿದ್ಧತೆಗಳು ಬೇರೆ ಬೇರೆಯಾಗಿರುತ್ತವೆ. ಬೋಧನೆಯ ಪೂರ್ವಸಿದ್ಧತೆಗೆ ಅನುಗುಣವಾಗಿ ಅದರ ಪರಿಣಾಮಗಳನ್ನು ಪರ್ಯಾಲೋಚಿಸಬೇಕಾಗುತ್ತದೆ. ಇದಕ್ಕೆ ಬೋಧಕರಿಗೆ ಅಗತ್ಯ ಸಮಯ ಮತ್ತು ಪರಿಶ್ರಮಗಳೆರಡೂ ಮುಖ್ಯ. ಶಿಕ್ಷಣದ ಗುಣಮಟ್ಟ ಹೆಚ್ಚಿಸುವಲ್ಲಿ ಮತ್ತು ಸಮಾಜದ ಏಳಿಗೆಗೆ ಸರ್ಕಾರದ ಕಾಳಜಿಯು ಎಷ್ಟೇ ಮಹತ್ತರದ್ದಾಗಿದ್ದರೂ ಅದನ್ನು ಕಾರ್ಯರೂಪಕ್ಕೆ ತರುವಾಗಿನ ಪರಿಣಾಮ ಮತ್ತು ಬೇಕಾದ ಸಿದ್ಧತೆಗಳು ಅಷ್ಟೇ ಮುಖ್ಯ. ಅಲ್ಲದೆ ವಿದ್ಯಾರ್ಥಿಗಳ ಕಲಿಕೆ ಮತ್ತು ಗ್ರಹಿಕೆಯ ಮಟ್ಟವನ್ನು ಹೆಚ್ಚಿಸುವಲ್ಲಿ ಬೋಧನೆಯ ವಿವಿಧ ಪ್ರಕ್ರಿಯೆಯ ಮೇಲೆ ಶಿಕ್ಷಕರಿಗೆ ಗಮನಹರಿಸಲು ಅವಕಾಶ ಮತ್ತು ಸಮಯವು ಅನಿವಾರ್ಯ. ಇವೆರಡನ್ನೂ ಇನ್ನಿತರ ಹೆಚ್ಚುವರಿ ಕಾರ್ಯಗಳು ಆವರಿಸಿಕೊಂಡರೆ, ಮುಖ್ಯ ಗುರಿಯು ಹಿಂದಕ್ಕೆ ಸರಿದುಬಿಡುತ್ತದೆ.

ಈ ಅಧ್ಯಯನದಲ್ಲಿ, ಶಾಲೆಯ ಮುಖ್ಯ ಗುರಿಯಾಗಿರುವ ಬೋಧನೆಯ ಮೇಲೆ ಶಿಕ್ಷಕರು ಗಮನವನ್ನು ಕೇಂದ್ರೀಕರಿಸಲು ಬೋಧನೇತರ ಕೆಲಸಗಳು ಅಡ್ಡಿಯಾಗಿರುವುದು ಕಂಡುಬರುತ್ತದೆ. ಪರಿಣಾಮವಾಗಿ, ಬೋಧನೆಯ ಗುಣಮಟ್ಟವು ಕುಸಿಯುತ್ತಲೇ ಇರುತ್ತದೆ. ಶಿಕ್ಷಕರ ತರಬೇತಿ, ಆಸಕ್ತಿ, ಪೂರ್ವಸಿದ್ಧತೆಗಳು ಎಷ್ಟೇ ಬಲವಾಗಿದ್ದರೂ ಅವಕ್ಕೆ ಆಸ್ಪದಕೊಡದಿರುವ ಹೆಚ್ಚುವರಿ ಕೆಲಸಗಳೇ ಇದ್ದರೆ ಶಿಕ್ಷಣದ ಮೂಲ ಉದ್ದೇಶದ ಬಗೆಗೆ ಯೋಚಿಸುವುದು ತೀರಾ ಅಸಂಬದ್ಧ ವಿಷಯವಾಗಿ ಬಿಡುತ್ತದೆ ಎನ್ನುವುದನ್ನು ಸೂಚಿಸುತ್ತದೆ.

ಒಟ್ಟಿನಲ್ಲಿ ಬಹುತೇಕ ಶಿಕ್ಷಕರು ತರಗತಿಯಲ್ಲಿ ಮಕ್ಕಳ ಕಲಿಕೆಗೆ ಅವಕಾಶ ಮಾಡಿಕೊಡುವ ಚಟುವಟಿಕೆಗಳನ್ನು ಆಯೋಜಿಸುವ ಬದಲಾಗಿ ಶಾಲಾ ನಿರ್ವಹಣೆ ಪ್ರಕ್ರಿಯೆಗಳು, ಶಾಲಾ ದಾಖಲಾತಿ ನಿರ್ವಹಣೆ ಹಾಗೂ ಶಾಲಾ ಸಮುದಾಯದ ಜೊತೆಗೆ ಮಾಡಬೇಕಾದ ಕೆಲಸಗಳು ಮುಂತಾದವುಗಳಲ್ಲಿ ಹೆಚ್ಚಿನ ಸಮಯವನ್ನು ವಿನಿಯೋಗಿಸುತ್ತಿರುವುದು ಕಂಡುಬರುತ್ತದೆ. ಶಿಕ್ಷಣದ ಮೂಲ ಗುರಿ, ಉದ್ದೇಶಗಳ ಸಾಧನೆಯ ಬದಲಾಗಿ ಪೂರಕ ಪ್ರಕ್ರಿಯೆಗಳನ್ನೇ ಪ್ರಧಾನವಾಗಿ ನೋಡುತ್ತಿರುವುದು ಕಳವಳಕಾರಿಯಾಗಿದ್ದು ವಿಭಿನ್ನ ಹಾಗೂ ವಿನೂತನ ಕಾರ್ಯಕ್ರಮಗಳು ಶಿಕ್ಷಕರನ್ನು ಮಕ್ಕಳ ಕಲಿಕೆಯಲ್ಲಿ ತೊಡಗುವುದಕ್ಕಿಂತ ಹೆಚ್ಚಾಗಿ ನಿರ್ವಹಣೆಯಂತಹ ಪ್ರಕ್ರಿಯೆಗೆ ಒಡ್ಡಿಕೊಳ್ಳುವ ಹಾಗೂ ದಾಖಲೆಗಳನ್ನು ಸೃಷ್ಟಿಸುವ ಕಡೆಗೆ ಹೆಚ್ಚಿನ ಗಮನ ಹರಿಸುವಂತೆ ಮಾಡಿದೆ. ಈ ಹಿನ್ನೆಲೆಯಲ್ಲಿ ಮಗುವಿನ ಕಲಿಕೆಗೆ ಪರಿಣಾಮಕಾರಿ ತರಗತಿ ನಿರ್ವಹಣೆಯತ್ತ ನೀತಿನಿರೂಪಕರು, ಅಧಿಕಾರಿಗಳು, ಸಂಯೋಜಕರು, ಶಿಕ್ಷಣಕ್ಷೇತ್ರದ ಕಾರ್ಯಕರ್ತರು ಚಿಂತಿಸಬೇಕಾದ ಅನಿವಾರ್ಯತೆಯನ್ನು ಈ ಅಧ್ಯಯನವು ಒತ್ತಿಹೇಳುತ್ತದೆ.

## ಪರಾಮರ್ಶನೆ


1. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005 - http://www.ncert.nic.in/rightside/links/pdf/framework/english/nf2005.pdf
2. ಮಂಡ್ಯ ಜಿಲ್ಲಾ ಶಿಕ್ಷಕರ ಮಾಹಿತಿ, 2015 - District wise U-DISE report 2016-17
3. ರೈಟ್ ಟು ಎಜುಕೇಷನ್ ಆಕ್ಟ್, 2009 - http://eoc.du.ac.in/RTE%20-%20notified.pdf
4. ಕಲಿಕಾ ಸಿದ್ಧಾಂತಗಳು – ಟೀಚರ್ಸ್ ಡೆವಲಪ್‌ಮೆಂಟ್ ಮಾಡ್ಯೂಲ್, ಅಜೀಂ ಪ್ರೇಮ್‌ಜಿ ಫೌಂಡೇಷನ್, ಮಂಡ್ಯ ಜಿಲ್ಲೆ (2014)



**ರವಿಕುಮಾರ್ ಬಿ. ಟಿ.** : ಇವರು ಅಜೀಂ ಪ್ರೇಮ್‌ಜಿ ಫೌಂಡೇಷನ್, ಮಂಡ್ಯ ಜಿಲ್ಲಾ ಸಂಸ್ಥೆಯಲ್ಲಿ ಕಳೆದ ಐದು ವರ್ಷಗಳಿಂದ 'ಆರಂಭಿಕ ಭಾಷೆ ಕಲಿಕೆ' ಕ್ಷೇತ್ರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶಿಕ್ಷಕರ ವೃತ್ತಿಪರ ಬೆಳವಣಿಗೆಯಲ್ಲಿ ನಿರತರಾಗಿದ್ದಾರೆ. ಶಿಕ್ಷಣ ಮತ್ತು ಸಮಾಜ ಕಾರ್ಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಇವರು ಒಟ್ಟು ಹದಿನೇಳು ವರ್ಷಗಳ ವೃತ್ತಿ ಅನುಭವ ಹೊಂದಿದ್ದಾರೆ. ಈ ಹಿಂದೆ ಅಜೀಂ ಪ್ರೇಮ್‌ಜಿ ಫೌಂಡೇಷನ್ ಪ್ರಾರಂಭಿಸಿದ್ದ 'ಕಲಿಕಾ ಖಾತ್ರಿ' ಕಾರ್ಯಕ್ರಮ, ಕೇಂದ್ರ ಸರ್ಕಾರದ 'ಸಂಪೂರ್ಣ ಸ್ವಚ್ಛತಾ ಆಂದೋಲನ', ಅಜೀಂ ಪ್ರೇಮ್‌ಜಿ ಫೌಂಡೇಷನ್ ಬೆಂಗಳೂರಿನ ಆಯ್ದ ಬಿಲ್ಡರ್ಸ್‌ಗಳು ಪ್ರಾರಂಭಿಸಿದ್ದ ವಲಸೆ ಕಾರ್ಮಿಕ ಮಕ್ಕಳ ಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸಿರುತ್ತಾರೆ.

*ಸಂಪರ್ಕ :* ravi@azimpremjifoundation.org